ಇನ್ನು ಎರಡನೆಯದಾಗಿ ಈ ಪ್ರಕರಣದ ಬಗ್ಗೆ ಕೆಲವರ ಮೇಲೆ ವಿನಾಕಾರಣ ಹೆರಾಸ್‌ಮೆಂಟ್ ಆಗಿದೆ ಎಂದು ಹೇಳಿದರು. ಆ ವಿಚಾರ ನನಗೆ ಈಗಲೇ ಗೊತ್ತಾಗಿದ್ದು. ಇನ್ನೋಸೆಂಟ್ ಪೀಪಲ್ಸ್ ಇದ್ದಾರೆ, ಅವರ ಮೇಲೆ ಹೆರಾಸ್‌ಮೆಂಟ್ ಆಗಬಾರದು. ಈ ಬಗ್ಗೆ ತಾವು ನನಗೆ ಕಳುಹಿಸಿಕೊಟ್ಟಿರುವ ಕಾಪಿಯನ್ನು ಪೋಲೀಸಿನವರಿಗೆ ಕಳುಹಿಸಿಕೊಡುತ್ತೇನೆ.

ಇನ್ನು ಮಾನ್ಯ ಬೈರೇಗೌಡರು ಹೊಸಹೊಸ ವಿಚಾರಗಳನ್ನು ಹೇಳಿದರು. ಒಂದು ಸೆಟ್ ಪ್ರಶ್ನೆ ಪತ್ರಿಕೆಯನ್ನು ತಯಾರು ಮಾಡುವಾಗಲೇ ಇಷ್ಟೊಂದು ಕಷ್ಟವಾಗುತ್ತಿರುವಾಗ ಮಾನ್ಯ ಸದಸ್ಯರು ಹೇಳಿದಂತೆ ಒಂದೇ ಸಬ್ಜೆಕ್ಟ್ ಬಗ್ಗೆ ಹತ್ತಾರು ಪ್ರಶ್ನೆಪತ್ರಿಕೆಗಳನ್ನು ತಯಾರು ಮಾಡಿದರೆ, ಅದರಿಂದ ಮುಂದೆ ಏನಾಗುತ್ತದೆಂಬುದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಎಜುಕೇಷನ್ ಬಹಳಷ್ಟು ಡೆವಲಪ್‌ಮೆಂಟ್ ಆಗಿದೆ ಸಾವಿರಾರು ಟೀಚರ್ಸ್ ಇದ್ದಾರೆ. ಲಕ್ಷಾಂತರ ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ವಿದ್ಯಾರ್ಥಿಗಳ ಪೇರೆಂಟ್ಸ್ ಸಹ ಸೇರುತ್ತಾರೆ. ಆದಕಾರಣ ಇದರಲ್ಲಿ ಎಲ್ಲರ ಜವಾಬ್ದಾರಿಯೂ ಇವೆ ಕಳೆದ ವರ್ಷ ದೆಹಲಿಯಲ್ಲಿಯೂ ಸಹ ಇದೇ ರೀತಿ ಆಗಿತ್ತು. ಈ ರೀತಿಯಾದರೆ ಬಹಳಷ್ಟು ತೊಂದರೆಗಳು ಬರುತ್ತವೆ. ನಮ್ಮ ರಾಜ್ಯದಲ್ಲಿ ಈ ವರ್ಷವೇ ಅಲ್ಲ, ಹತ್ತು ವರ್ಷಗಳ ಹಿಂದೆ, ಹದಿನೈದು ವರ್ಷಗಳ ಹಿಂದೆ ಸಹ ಆಗಿತ್ತು. ಕಳೆದ ವರ್ಷ ಸಹ ಸ್ವಲ್ಪ ಮಟ್ಟಿಗೆ ಆಗಿತ್ತು. ಈ ರೀತಿ ಕಳೆದ ಹತ್ತಾರು ವರ್ಷಗಳಿಂದ ಆಗಾಗ್ಗೆ ಸ್ವಲ್ಪ ಮಟ್ಟಿಗೆ ಆಗುತ್ತಿದ್ದರೂ ಸಹ ಅದನ್ನು ಸೀರಿಯಸ್ ಆಗಿ ತೆಗೆದುಕೊಂಡಿರಲಿಲ್ಲ. ಈ ಸಲವೇ ಇದನ್ನು ಸೀರಿಯಸ್ ಆಗಿ ತೆಗೆದುಕೊಂಡು, ಪರೀಕ್ಷೆಯನ್ನು ಸಸ್ಪೆಂಡ್ ಮಾಡಿ ಹೊಸದಾಗಿ ಮಾಡುತ್ತಿರುವುದು. ಇದಕ್ಕೆ ಎಲ್ಲರ ಸಹಕಾರವೂ ಬೇಕು ಏಕೆಂದರೆ ಇದೇನೂ ಅಷ್ಟೊಂದು ಸುಲಭದ ವಿಚಾರವಲ್ಲ. ಮತ್ತು ಇದು ಒಬ್ಬರು ಇಬ್ಬರು ಅಥವಾ ಮೂವರಿಂದ ಆಗುವುದಿಲ್ಲ ಇದೊಂದು ಕಾಂಪ್ಲಿಕೇಟೆಡ್ ಸಬ್ಜೆಕ್ಟ್, ಎಕ್ಸಾಮಿನೇಷನ್ ಸಿಸ್ಟಮ್ ಎಂದರೆ ಅದು ಕಾಂಪ್ಲಿಕೇಟೆಡ್ ಆಗಿದೆ. ಈ ಕಾರಣದಿಂದ ಈ ಪರೀಕ್ಷಾ ಪದ್ಧತಿಯನ್ನು ಡೀಸೆಂಟ್ರಲೈಜ್ ಮಾಡಬೇಕೆಂದು ಕೆಲವರು ಹೇಳಿದರು. ಇದೂ ಕೂಡ ಯೋಚನೆ ಮಾಡುವಂತಹ ವಿಚಾರವಾಗಿದೆ. ಕೆಲವು ಸಂದರ್ಭಗಳಲ್ಲಿ ಪೇಪರ್ ಕರಕ್ಷನ್ ಆಗುವ ಸಂದರ್ಭಗಳಲ್ಲಿ ಕರಪ್ಷನ್ ಆಗುವುದುಂಟು ನಾವು ಡೀಸೆಂಟ್ರಲೈಜ್ ಮಾಡಿದರೂ ಸಹ ಬೇರೆ ಬೇರೆ ಕಡೆ ಬೇರೆ ಬೇರೆ ಪೇಪರ್‌ಗಳನ್ನು ಕೊಡುವುದಕ್ಕೆ ಬರುದಿಲ್ಲ. ಹೈಕೋರ್ಟಿನ ತೀರ್ಮಾನದ ಪ್ರಕಾರ ಎಲ್ಲೆಲ್ಲಿ ನಮ್ಮ ಜುರಿಸಡಿಕ್ಷನ್ ಇರುತ್ತದೆ, ಅಲ್ಲೆಲ್ಲಾ ಒಂದೇ ರೀತಿಯ ಸ್ಟ್ಯಾಂಡರ್ಡ್ ಪ್ರಶ್ನೆ ಪತ್ರಿಕೆಯನ್ನು ಕೊಟ್ಟು ಜಡ್ಜ್ ಮಾಡಬೇಕೆಂದಿದೆ. ಮಾನ್ಯ ಪುಟ್ಟಸ್ವಾಮಯ್ಯನವರು ಪ್ರತಿ ಹಂತದಲ್ಲಿಯೂ ದಕ್ಷತೆ ಇರಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಅದೇ ರೀತಿ ಸಮಾಜದಲ್ಲಿ ಸಹ ದಕ್ಷತೆ ಹೆಚ್ಚಬೇಕು ಮುಖ್ಯವಾಗಿ National Character build up ಆಗಬೇಕು, ಆದರೆ ಜವಾಬ್ದಾರಿ ಸ್ಥಾನದಲ್ಲಿರುವವರು ಹೆಚ್ಚು ದಕ್ಷರಾಗಿರಬೇಕೆಂಬುದನ್ನು ನಾನು ಒಪ್ಪುತ್ತೇನೆ ಮತ್ತು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡಬೇಕೆಂಬುದನ್ನು ಸಹ ನಾನು ಖಂಡಿತವಾಗಿ ಒಪ್ಪುತ್ತೇನೆ. ಈ ಒಂದು ಕಾರಣದಿಂದಲೇ ನಾನು ದಿಟ್ಟ ಹೆಜ್ಜೆ ಇಟ್ಟಿರುವುದು. Very promtly and probably very boldly we have taken steps. I think you will all congratulate me for such a step which had never been taken in the past. Instead of asking for my resignation, you should have congratulated me for the very bold step and very prompt action taken. I am sure you will appreciate the stand taken by me.

Budget Estimates for 1977-78

General Discussion (Debate Continued)

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕಂಥ ಡಿಮ್ಯಾಂಡ್‌ಗಳನ್ನು ವಿರೋಧ ಮಾಡುತ್ತಾ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಇದುವರೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನನ್ನ ಮಿತ್ರರಾದಂಥ ಶಿರ್ನಾಳಿ ಚಂದ್ರಶೇಖರ್ ಅವರು ಕೆಲವು ವಿಷಯಗಳ ಬಗ್ಗೆ ಮಾತನಾಡಿದರು. ಹಿಂದೆ ಆದಂಥ

ತಪ್ಪುಗಳನ್ನು ತಿದ್ದಿಕೊಂಡು, ಆ ತಪ್ಪುಗಳನ್ನೇ ಮತ್ತೆ ಮಾಡದೆ, ಹೊಸ ರೀತಿಯಿಂದ ನಡೆದುಕೊಳ್ಳುತ್ತೇವೆಂಬ ರೀತಿಯಲ್ಲಿ ಈ ಬಡ್ಜೆಟ್ ಮಂಡನೆಯಾಗಬೇಕಾಗಿತ್ತು. ಆದರೆ ಆ ರೀತಿ ಬಂದಿಲ್ಲ. ಆದಕಾರಣ ಇದು ಒಂದು ಆಶಾದಾಯಕವಾದಂಥ ಬಡ್ಜೆಟ್ ಆಗಿಲ್ಲವೆಂದು ನಾನು ನಿರಾಶೆಯಿಂದ ಹೇಳಬೇಕಾಗುತ್ತದೆ. ಈ ಸಲದ ಬಡ್ಜೆಟ್ 38.20 ಕೋಟಿ ರೂ ಗಳಷ್ಟು ಕೊರತೆಯನ್ನು ಸೂಚಿಸುತ್ತದೆ. ಪ್ರಸಕ್ತ ವರ್ಷದ ಕೊರತೆ 12.14 ಕೋಟಿ ಇದ್ದರೆ, ಮುಂದಿನ ವರ್ಷದ ಸಮಗ್ರ ಖೋತಾ ಮೊತ್ತವು 26.06 ಕೋಟಿ ಇದೆ. ಈ ರೀತಿ 38.20 ಕೋಟಿ ರೂ. ಗಳಷ್ಟು ಕೊರತೆ ಇದೆ. ಇದಕ್ಕೆ 5 ಕೋಟಿ ರೂ. ಗಳಷ್ಟು ರಿಲೀಫ್‌ನ್ನು ಸಜೆಸ್ಟ್ ಮಾಡಲಾಗಿದೆ. ಈ ಸಲ ಹೊಸ ತೆರಿಗೆಗಳನ್ನು ಹಾಕದಿರುವುದು ಸ್ವಾಗತಾರ್ಹವಾದರೂ ಸಹ ಸೇಲ್ ಟ್ಯಾಕ್ಸ್ ಮತ್ತು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನ್ನು ಹಿಂಬಾಗಿಲಿನಿಂದ ಹಾಕುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಅದು ಬಹಳ ಸ್ವಲ್ಪ.

ಶ್ರೀ ವಿ. ಎನ್. ಪಾಟೀಲ್.—ಸರ್ಜರಿ ಆದಮೇಲೆ ರಕ್ತ ಬಂದೇ ಬರುತ್ತದೆ. ಅದರಂತೆ ಇಲ್ಲಿ ಹಿಂದಿನ ಪಾಕೇಟ್‌ಗೆ ಕೈಹಾಕಿ ಎರಡು ರೂಪದಲ್ಲಿ ಟ್ಯಾಕ್ಸ್ ಪಡೆದುಕೊಳ್ಳುತ್ತಿದ್ದೀರಿ ಮುಖ್ಯವಾಗಿ ಹಣದುಬ್ಬರವನ್ನು ತಡೆಗಟ್ಟುವುದಕ್ಕೆ ನಿಮ್ಮ ಕೈಯಿಂದ ಸಾಧ್ಯವಾಗಿಲ್ಲ. ಮತ್ತು ಬೆಲೆಗಳನ್ನು ಹತೋಟಿಯಲ್ಲಿಡಲು ನಿಮ್ಮ ಕೈಯಲ್ಲಿ ಸಾಧ್ಯವಾಗಿಲ್ಲ. ಇಂದು ನಮ್ಮ ಭಾರತದ ನಾಣ್ಯದ ಬೆಲೆ ಸ್ವಲ್ಪ ಹೆಚ್ಚಾಗಿದ್ದರೂ ಸಹ, ಇಂದು 25 ಪೈಸೆ ಒಂದು ರೂಪಾಯಿಯ ಬೆಲೆಯಾಗಿದೆ. ಆದಕಾರಣ ತಾವು ಇನ್‌ಫ್ಲೇಷನ್ ಕನ್‌ಟ್ರೈನ್ ಮಾಡಿದ್ದೇವೆಂದರೆ ಅದು ಟಾಲ್‌ಕ್ಲೈಮ್ ಆಗುತ್ತದೆ. ನಾವು ಏನು ನಿರೀಕ್ಷೆ ಮಾಡುತ್ತಿದ್ದೇವೆಂದರೆ ತಮಗೆ ಒಂದು ಹೊಸ ಷಾಕ್ ಟ್ರೀಟ್‌ಮೆಂಟ್ ಸಿಕ್ಕಿದ ಮೇಲೆ ಜನರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಇನಷ್ಟು ಹೆಚ್ಚಿಗೆ ಮಾಡುತ್ತೀರಿ, ಜನರ ಒಂದು ಸಮಸ್ಯೆಗಳನ್ನು ಬಗೆಹರಿಸುವಂತಹ ಕೆಲಸಗಳನ್ನು ಮಾಡುತ್ತೀರಿ ಎಂದು ನಿರೀಕ್ಷೆ ಮಾಡಿದ್ದೆವು. ಆದರೆ ತಾವು ಈ ಬಗ್ಗೆ ಇದರಲ್ಲಿ ಏನನ್ನೂ ಹೇಳಿಲ್ಲ. ಇದರಲ್ಲಿ ನ್ಯೂಟ್ರಿಷನ್ ಪ್ರೋಗ್ರಾಮ್ ಬಗ್ಗೆ ಮಾತ್ರ ಒಂದು ಹೊಸ ಸಜೆಷನ್ ಇದೆ. ಅದಕ್ಕೆ ಒಂದು ಕೋಟಿ ರೂ ಗಳನ್ನು ಖರ್ಚು ಮಾಡುತ್ತಿದ್ದೀರಿ. ಇದಕ್ಕೆ ಇನ್ನೂ ಹೆಚ್ಚಿಗೆ ಹಣವನ್ನು ಖರ್ಚು ಮಾಡಿದರೂ ಪರವಾಯಿಲ್ಲ. ಏಕೆಂದರೆ ನಮ್ಮಲ್ಲಿ ಅರ್ಧ ಹೊಟ್ಟೆ ಮಾತ್ರ ಊಟ ಮಾಡತಕ್ಕಂಥ ಬಡ ಜನರು ಏನಿದ್ದಾರೆ, ಅವರಿಗೆ ಇದರಿಂದ ಇನ್ನಷ್ಟು ಪರಿಹಾರ ಸಿಗುವುದಕ್ಕೆ ಸಾಧ್ಯವಾಗುತ್ತಿತ್ತು. ಇದು ಒಂದು ಸ್ವಾಗತಾರ್ಹವಾದಂಥ ಕಾರ್ಯಕ್ರಮವಾದರೂ ಸಹ ಇನ್ನೂ ಅನೇಕ ಮಹತ್ವದ ಕಾರ್ಯಕ್ರಮಗಳಿವೆ. ಸರ್ಕಾರದವರು ಯಾವುದೇ ಒಂದು ಕೆಲಸವನ್ನು ಮಾಡಲಿ, ಅದಕ್ಕೆ ಸಜೆಸ್ಟೀವ್ ಕಮಿಷನ್ ಮತ್ತು ಕನ್‌ಸ್ಟ್ರಕ್ಟೀವ್ ಕಮಿಷನ್ ಇರಬೇಕು. ಈ ರೀತಿಯಿಂದ ಕೆಲಸಗಳನ್ನು ಮಾಡಿ ಮುಗಿಸಿದರೆ ಚೆನ್ನಾಗಿರುತ್ತದೆ. ಇಲ್ಲಿ ಅನೇಕ ಬಾಬುಗಳಿಗೆ ಸರ್ಕಾರದವರು ಹೆಚ್ಚು ಹಣವನ್ನು ಒದಗಿಸಿಲ್ಲ. ಕರ್ನಾಟಕ ರಾಜ್ಯದ ಬೊಕ್ಕಸವೇ ತಮ್ಮ ಕೈಯಲ್ಲಿದ್ದರೂ ಸಹ ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಹಣವನ್ನು ಒದಗಿಸಿಲ್ಲ. ಇದಕ್ಕೆ ಎಷ್ಟೇ ಹಣ ತೊಡಗಿಸಿದರೂ ಸಹ, ಅದು 3 ಅಥವಾ 5 ವರ್ಷಗಳಲ್ಲಿ ರಿಟರ್ನ್ಸ್ ಬರುತ್ತದೆ. ಆದಕಾರಣ ಈ ಬಾಬಿಗೆ ಹೆಚ್ಚು ಹಣ ಖರ್ಚು ಮಾಡಬೇಕು. ಮುಖ್ಯವಾಗಿ ಬರಗಾಲಪೀಡಿತಕ್ಕಂಥ ಜಿಲ್ಲೆಗಳಲ್ಲಿ ಒಂದು ಹನಿ ನೀರೂ ಸಹ ಸಮುದ್ರಕ್ಕೆ ಸೇರದಂತೆ ಮಾಡಲು ಮೈನರ್ ಇರಿಗೇಷನ್ ಬಾಬಿಗೆ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಆದರೆ ಈ ಸಲ ಈ ಬಾಬಿಗೆ ಕೊಟ್ಟಿರುವ ಹಣ ಸಾಲದು. ಇದಕ್ಕಾಗಿ ಕೇವಲ 15 ಕೋಟಿ ರೂ. ಗಳನ್ನು ಖರ್ಚು ಮಾಡಲಾಗುತ್ತಿದೆ. ಇದು ಸಾಲದು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಇದಕ್ಕಾಗಿ ಹೆಚ್ಚು ಹೆಚ್ಚು ಹಣ ಖರ್ಚು ಮಾಡಬೇಕೆಂದು ಹೇಳುತ್ತೇನೆ.

5-30 P. M.

ಮೊನ್ನೆತಾನೆ ಎಲೆಕ್ಷನ್ ಮುಗಿದಿದೆ. ಆದ್ದರಿಂದ ಸತ್ತಮೇಲೆ ಕಣ್ಣೀರು ಸುರಿಸುವುದು ಸ್ವಾಭಾವಿಕ. ಈಗ ಈ ರಾಜಕೀಯ ಪಕ್ಷಗಳಲ್ಲಿ ಬಯ್ಯುವವರೂ ಮತ್ತು ಬೈಯ್ಸಿಕೊಳ್ಳುವವರೂ ಒಂದೇ ಸ್ಟ್ಯಾಂಡರ್ಡ್. ಇದರಲ್ಲೇನೂ ಬಹಳ ವ್ಯತ್ಯಾಸವಿಲ್ಲ. ಒಂದೇ ಕ್ಯಾರೆಕ್ಟರ್ ಎಂದು ಹೇಳಬಹುದು. ಕಾಂಗ್ರೆಸ್ ಸರ್ಕಾರದವರು ಟೆನೆನ್ಸಿಯ ಬಗ್ಗೆ ಮತ್ತು ಋಣ ಪರಿಹಾರದ ಬಗ್ಗೆ ಒಂದು ಪ್ರಗತಿಪರವಾದ ಪ್ರೋಗ್ರಾಮ್ ಹಾಕಿಕೊಂಡಿದ್ದರು ಆದರೆ ಅವುಗಳನ್ನು ಸೆಂಟ್‌ಪರ್ಸೆಂಟ್

ಪೂರ್ಣವಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಕೊನೆಗೆ 20 ಅಂಶಗಳ ಕಾರ್ಯಕ್ರಮವನ್ನು ಹಾಕಿಕೊಂಡರು ಆ ಮೇಲೆ 25 ಅಂಶಗಳ ಕಾರ್ಯಕ್ರಮ ಮಾಡಿದರು. ಆದರೂ ಕೂಡ ಜನತೆಯ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅದರ ಬಗ್ಗೆ ಹೆಚ್ಚು ಗಮನವನ್ನು ಕೊಡಲಿಲ್ಲ. ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲಿಲ್ಲ. ಕಾರ್ಮಿಕರ ಬೋನಸ್ ಬಗ್ಗೆ, ಅವರ ಸ್ಟ್ರೈಕ್ ಬಗ್ಗೆ ಅವರ ಪ್ರಾವಿಡೆಂಟ್ ಫಂಡ್ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ ಅವರ ಸುತ್ತಲೂ ಕೂಡ ವೆಸ್ಟೆಡ್ ಇಂಟರೆಸ್ಟ್ ಇದ್ದವರು ಸೇರಿಕೊಂಡಿದ್ದರು. ಇದರಿಂದಾಗಿ ಕಾರ್ಮಿಕರ ಸಮಸ್ಯೆಗಳು ಬಗ್ಗೆಹರಿಯಲಿಲ್ಲ. ಕಾರ್ಮಿಕರ ಮತ್ತು ಬಡ ಜನತೆಯ ಬಗ್ಗೆ ಅವರ ಹಿತರಕ್ಷಣೆಯ ಬಗ್ಗೆ ಒಂದು ಪ್ರಗತಿಪರವಾದ ಬಜೆಟ್ ಬರುತ್ತದೆ ಎಂದು ನಾವು ನಿರೀಕ್ಷಣೆ ಮಾಡಿದ್ದೆವು, ಆದರೆ ಇದರಲ್ಲಿ ಅಂಥಾ ಆಶಾದಾಯಕವಾದ ಕೆಲಸಗಳು ಇದರಲ್ಲಿ ಕಾಣುತ್ತಿಲ್ಲ. ಇದು ಒಂದು ನಿರಾಶಾದಾಯಕವಾದ ಬಜೆಟ್ ಎಂದು ಹೇಳಬಹುದು. ಸ್ಟೇಟಸ್ಕೋ ಮೇಂಟೇನ್ ಮಾಡಿಕೊಂಡು ಹೋದರೆ ಸಾಕು. ಅಷ್ಟು ಬಿಟ್ಟು ಮತ್ತೊಂದೇನೂ ಇದರಲ್ಲಿ ಕಾಣುವುದಿಲ್ಲ ನಾನು ಸರ್ಕಾರದವರಿಗೆ ಮುನ್ನೆಚ್ಚರಿಕೆಯನ್ನು ಕೊಡುತ್ತೇನೆ. ಜನಗಳಲ್ಲಿ ನಿರಾಶಾಭಾವನೆ ಬೆಳೆಯುತ್ತಿದೆ. ಅದಕ್ಕೆ ಅವಕಾಶವನ್ನು ಕೊಡಬಾರದು. ಅವರಕಡೆ ಇವರು ಬೆರಳು ತೋರಿಸಿ ಇವರ ಕಡೆ ಅವರು ಬೆರಳ ತೋರಿಸಿ ಕಾಲವನ್ನು ಕಳೆಯುವುದು ಸರಿಯಲ್ಲ. ನಿಜವಾಗಿ ಜನತೆಯ ಸಮಸ್ಯೆಗಳು ಏನಿವೆ ಅವುಗಳನು ಬಗೆಹರಿಸತಕ್ಕ ಪ್ರಯತ್ನ ಮಾಡಬೇಕು. ತಮಗೆ ನಾನು ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ನಾವು ಬಹಳ ಪ್ರೊಗ್ರೆಸೀವ್ ಕಾನೂನು ಮಾಡುತ್ತಿದ್ದೇವೆ. ಟ್ರಿಬ್ಯುನಲ್ ತೀರ್ಮಾನಗಳನ್ನು ಬಹಳ ತೀವ್ರಗತಿಯಲ್ಲಿ ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳುತ್ತಾರೆ. ನನ್ನ ಕ್ಷೇತ್ರದಲ್ಲಿ ಒಬ್ಬರು ಟ್ರಿಬ್ಯುನಲ್ ಸದಸ್ಯರು ವೆಸ್ಟೆಡ್ ಇಂಟರೆಸ್ಟ್ ಇರುವುದರಿಂದ ಅವರು ಈಗ ಸುಮಾರು 4 ತಿಂಗಳಿಂದ ಟ್ರಿಬ್ಯುನಲ್ ಮೀಟಿಂಗ್ ಅಟೆಂಡ್ ಮಾಡುತ್ತಾ ಇಲ್ಲ. ಇದರಿಂದಾಗಿ ಈಗ ನಾಲ್ಕು ತಿಂಗಳಿಂದ ಟ್ರಿಬ್ಯುನಲ್ ಕೇಸುಗಳು ಒಂದೂ ಡಿಸ್‌ಪೋಜ್ ಆಗಿಲ್ಲ. ಇದರ ಅರ್ಥ ಏನು? ಹಿಂದುಳಿದ ಜಾತಿಯವರಿಗೆ ಹರಿಜನ ಗಿರಿಜನರಿಗೆ, ಮತ್ತು ಬಡವರಿಗೆ ಬೇಕಾದಷ್ಟು ಅನುಕೂಲತೆಗಳನ್ನು ಒದಗಿಸಿಕೊಡುತ್ತೇವೆ ಎಂದು ಹೇಳುತ್ತಾರೆ. ಕೆಲವು ಕಡೆ ಹರಿಜನಗಿರಿಜನರಿಗೆ ಎಂದು ಸರ್ಕಾರದಿಂದ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಕುಡಿಯುವ ನೀರಿನ ಬಾವಿಯನ್ನು ತೋಡಿಸಿದ್ದಾರೆ. ಈ ಬಾವಿಯನ್ನು ಆ ಊರಿನ ಗ್ರಾಮಪಂಚಾಯಿತಿಯ ಚೇರ್ಮನ್ ಅವರು ದ್ರಾಕ್ಷಿ ಬೆಳೆಯನ್ನು ಬೆಳೆಯುವುದಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಇದು ನನ್ನ ಕ್ಷೇತ್ರದಲ್ಲಿ ನಡೆದಿರುವ ವಿಚಾರ ಈ ಬಗ್ಗೆ ನಾನು ಸರ್ಕಾರಕ್ಕೆ ಒಂದು ಪತ್ರವನ್ನು ಕೂಡ ಬರೆದಿದ್ದೇನೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಈಗ ಸುಮಾರು ಒಂದೂವರೆ ವರ್ಷದಿಂದ ಆ ಊರಿನ ಪಂಚಾಯಿತಿ ಚೇರ್ಮನ್ ಅವರು ಹರಿಜನಗಿರಿಜನರಿಗೆ ಕುಡಿಯುವ ನೀರಿಗಾಗಿ ಸರ್ಕಾರದವರು ತೋಡಿಸಿದಂತಹ ಬಾವಿಯಲ್ಲಿ ನೀರನು ಉಪಯೋಗಿಸಿಕೊಂಡು ದ್ರಾಕ್ಷಿ ಬೆಳೆಯನ್ನು ಬೆಳೆಯುತ್ತಿದ್ದಾರೆ ಎಂದರೆ ಇದು ನಿಜವಾಗಿಯೂ ಶೋಚನೀಯವಾದ ವಿಚಾರ. ಸವರ್ಣೀಯರು ಹರಿಜನಗಿರಿಜನರಿಗೆ ಬಾವಿಯಲ್ಲಿ ನೀರು ತೆಗೆದುಕೊಳ್ಳುವುದಕ್ಕೆ ತೊಂದರೆ ಕೊಡುತ್ತಾರೆ ಎಂದು ಸರ್ಕಾರದವರು 28 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕುಡಿಯುವ ನೀರಿನ ಬಾವಿಯನ್ನು ತೋಡಿಸಿದರೆ ಅದನ್ನು ಪಂಚಾಯಿತಿಯ ಚೇರ್ಮನ್ ಅವರು ದ್ರಾಕ್ಷಿ ತೋಟವನ್ನು ಬೆಳೆಸುವುದಕ್ಕೆ ಉಪಯೋಗಿಸುತ್ತಿದ್ದಾರೆ. ಈ ಬಗ್ಗೆ ವಿಚಾರಣೆ ಮಾಡಿ ವರದಿಯನ್ನು ತರಿಸಬೇಕು ಎಂದು ನಾನು ಪತ್ರ ಬರೆದರೆ ಆ ಬಗ್ಗೆ ಇನ್ನೂ ಉತ್ತರ ಬಂದಿಲ್ಲ.

ಶ್ರೀ ಎಂ.ವೈ. ಘೋರ್ಪಡೆ —ನಾನು ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ರಿಪೋರ್ಟ್ ತರಿಸಿದ್ದೇನೆ. ಅದು ಸರಿಯಿಲ್ಲ ಎಂದು ಹೇಳುವುದಾದರೆ ಮತ್ತೊಂದು ರಿಪೋರ್ಟ್ ಬೇಕಾದರೆ ತರಿಸೋಣ. ಇದನ್ನು ಮುಚ್ಚಿಡುವ ಉದ್ದೇಶವೇನೂ ಇಲ್ಲ. ಹರಿಜನಗಿರಿಜನರಿಗಾಗಿ ಮಾಡಿರತಕ್ಕ ಬಾವಿ ಏನಿದೆ ಅದರಲ್ಲಿ ನೀರಿಲ್ಲ ಎಂದು ವರದಿ ಮಾಡಿದ್ದಾರೆ. ಆದ್ದರಿಂದ ಅಲ್ಲಿರತಕ್ಕ ಹರಿಜನಗಿರಿಜನರು ಇನ್ನೊಂದು ಬಾವಿಯಲ್ಲಿ ನೀರನ್ನು ಉಪಯೋಗಿಸುತ್ತಾರೆ ಎಂದು ವರದಿ ಬಂದಿದೆ ಮಾನ್ಯ ಸದಸ್ಯರು ಬೇಕಾದರೆ. ರಿಪೋರ್ಟ್ ನೋಡಲಿ ಅದರ ಮೇಲೆ ಏನು ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡೋಣ.

ಶ್ರೀ ಎ. ಎನ್. ಪಾಟೀಲ್.—ಆ ಬಾವಿ ಒಣಗಿ ಹೋಗಿದೆ: ಅಲ್ಲಿನ ಹರಿಜನಗಿರಿಜನರು ಸಮೀಪದಲ್ಲಿ ಇರತಕ್ಕ ಬಾವಿಯಲ್ಲಿ ನೀರನ್ನು ತೆಗೆದುಕೊಳ್ಳುತ್ತಾರೆ ಎಂದು ಹೇಳುವ ವಿಚಾರ ದುರ್ದೈವದ ಸಂಗತಿ. ನನಗೆ ಗೊತ್ತಿರುವ ಪ್ರಕಾರ ಈಗ ಆ ಬಾವಿಯಲ್ಲಿ ನೀರು ಇದೆ. ಅದನ್ನು ಆ ಊರಿನ ಗ್ರಾಮ ಪಂಚಾಯಿತಿ ಚೇರ್ಮನ್ ಉಪಯೋಗಿಸಿಕೊಂಡು ದ್ರಾಕ್ಷಿ ಬೆಳೆಯನ್ನು ಬೆಳೆಯುತ್ತಿದ್ದಾರೆ ಎಂದು ನನಗೆ ಗೊತ್ತಾಗಿದೆ, ಇದನ್ನು ಇನ್‌ಸ್ಪೆಕ್ಷನ್ ಮಾಡಿಕೊಂಡು ಬರುವುದಕ್ಕೆ ಹೋದಂತಹ ಡಿವಿಜನಲ್ ಕಮೀಷನರು ಮತ್ತು ಇನೂ ಕೆಲವು ಆಫೀಸರುಗಳು ಆ ಊರಿನ ಗ್ರಾಮ ಪಂಚಾಯಿತಿ ಚೇರ್ಮನ್ ಮನೆಗೆ ಹೋಗಿ ಕುಳಿತುಕೊಂಡು ಸೀರಾಪುರಿ ಬಾಸುಂದಿ ಇದನ್ನೆಲ್ಲಾ ತಿಂದು ಅಲ್ಲಿ ಹರಿಜನ ಗಿರಿಜನರಿಗೆ ಕುಡಿಯುವ ನೀರಿಗೆ ಯಾವ ತೊಂದರೆ ಇಲ್ಲ ಎಂದು ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಿದ್ದಾರೆ

ಈ ಮನೋವೃತ್ತಿ ಬೆಳೆಯುವುದಕ್ಕೆ ಕಾರಣೀಭೂತರು ಯಾರು. ಈ ಮನೋವೃತ್ತಿ ವಿಧಾನ ಸೌಧನಿಂದ ಬೆಳೆಯುತ್ತದೆ. We are equally responsible and guilty of such lapses on the part of officers ಗವರ್ನಮೆಂಟ್ ಲ್ಯಾಂಡ್‌ನ್ನು ಅಕ್ವೈರ್ ಮಾಡಿ, ಗವರ್ನಮೆಂಟ್ ಪ್ರಾಪರ್ಟಿಯಲ್ಲಿ ಬೆಳೆ ಬೆಳೆದಿದ್ದಾರೆ. ಅಂತಹ ಕ್ಯಾಟಗಾರಿಕಲ್ ಸ್ಟೇಟ್‌ಮೆಂಟ್ ಬೇಕು ಎಂದು ಕೇಳತಕ್ಕಂಥ ಅಧಿಕಾರ ಜನರಿಗೆ ಇದೆ. ಏಕೆಂದರೆ ಇವತ್ತು 28 ಸಾವಿರ ರೂಪಾಯಿಗಳನ್ನು ಜನತೆಯ ಬೊಕ್ಕಸದಿಂದ ಖರ್ಚುಮಾಡಿದ್ದೀರಿ. ಇವತ್ತು ನಮ್ಮ ಗವರ್ನಮೆಂಟ್ ಪಾಲಿಸಿ ಈ ರೀತಿಯಾಗಿದೆ. ಜನರಲ್ಲಿ ಒಂದು ಸಮಸ್ಯೆ ಇದೆ. ಇವತ್ತು ಯಾರಾದರೂ ಅಧಿಕಾರಿ ಇದ್ದರೆ; ಅವರು ಅವರ ಜಾತಿಯವರಿಗೆ ಏನಾದರೂ ಹೆಲ್ಪ್ ಮಾಡಿದರೆ ತನ್ನ ಜನರಿಗೆ ಹೆಲ್ಪ್ ಮಾಡಿದ್ದಾರೆ ಎಂದು ಹೇಳುತ್ತಾರೆ. ಹಾನೆಸ್ಟಿ, ಇಂಟಿಗ್ರಿಟಿ ಇದ್ದಂಥ ಅಧಿಕಾರಿಗಳನ್ನು ಇವತ್ತು ಡಿಸ್‌ಕ್ವಾಲಿಫಿಕೇಷನ್ ಮಾಡುವುದಕ್ಕೆ ಹೊರಟಿದ್ದಾರೆ. ಯಾರಿಗೆ ಪುಷಿಂಗ್ ಪವರ್, ಮತ್ತು ಪುಲ್ಲಿಂಗ್ ಪವರ್ ಇದೆ ಅವರು ಮುಂದೆ ಬರುತ್ತಿದ್ದಾರೆ. ಇದನು ಎಷ್ಟು ಕಂಡಂ ಮಾಡಿದರೂ ಸರಿ. It will be rather too difficult for him to do anything. If he does that, he will be accused of bias for the Harijan community and of harassing the Lingayat Chairman. ಕಮ್ಯುನಿಟಿ ಮಧ್ಯದಲ್ಲಿ ಬರುತ್ತದೆ, ಅದು ಬೇಡ ಎಂದು ನಾನು ಹೇಳುತ್ತೇನೆ ನಾನು ಒಂದು ನಿದರ್ಶನವನ್ನು ಕೊಡುತ್ತೇನೆ. ಸರ್ಕಾರದವರು ಬಡವರ ಸಲುವಾಗಿ, ರೈತರ ಸಲುವಾಗಿ ಅವರನ್ನು ಮುಂದೆ ತರೋಣ ಎಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಕೊಳವೆ ಭಾವಿಗಳನ್ನು ತೆಗೆದಿದ್ದೇವೆ ಎಂದು ಫಿಗರ್ಸ್ ಕೊಟ್ಟಿದ್ದಾರೆ. ನಾನು ಕ್ಷಾಮ ಪೀಡಿತ ಪ್ರದೇಶದಿಂದ ಬಂದವನು. ಕಳೆದ 5 ವರ್ಷಗಳಲ್ಲಿ ಸುಮಾರು 11,800 ಕೊಳವೆ ಭಾವಿಗಳನ್ನು ತೆಗೆದಿದ್ದೇವೆ ಎಂದು ಹೇಳಿದ್ದೀರಿ. ಇದರಲ್ಲಿ 9900 ಕೊಳವೆ ಭಾವಿಗಳು ಸಕ್ಸಸ್‌ಫುಲ್ ಆಗಿದೆ ಎಂದೂ ಹೇಳಿದ್ದೀರಿ. ಉಳಿದ 1900 ಕೊಳವೆ ಬಾವಿಗಳು ಹಾಗೇ ಇವೆ. ಅವುಗಳನ್ನು ಒಂದು ಸಾರಿ ರಿಪೇರಿ ಮಾಡಿದರೆ ಮತ್ತೊಂದು ಸಾರಿ ರಿಪೇರಿ ಮಾಡುವುದಕ್ಕೆ ಬರುವುದಿಲ್ಲ. ಇದರಲ್ಲಿ ಕೆಲವು ಡೆಡ್‌ಕ್ಯಾಪಿಟಲ್ ಆಗಿದೆ ಎನ್ನುವ ಸಮಸ್ಯೆ ಬರುತ್ತದೆ. 50 ಪರ್ಸೆಂಟ್ ಬಾವಿಗಳು ಯೂಸ್‌ನಲ್ಲಿವೆ. ವೆಸ್ಟೆಡ್ ಇಂಟರೆಸ್ಟ್. ಕ್ಯಾಪಿಟಲಿಸ್ಟ್ ಯಾರು ಇರುತ್ತಾರೆ ಅವರಿಗೆ ಒಂದು ಮೋಟೀವ್ ಇರುತ್ತದೆ. ಅವರಿಗೆ ದೇವರು ಎಂದರೆ ಮನಿ. ಅವರು ತಮ್ಮ ಭೂಮಿಯಲ್ಲಿ ಕೊಳವೆ ಬಾವಿಗಳನ್ನು ತೆಗೆಸಿಕೊಂಡಿದ್ದಾರೆ; ಅದಕ್ಕೆ ಸರ್ಕಾರದ ದುಡ್ಡು ಖರ್ಚಾಗಿದೆ. ಕ್ಷಾಮಪೀಡಿತ ಪ್ರದೇಶದ ಜನರಿಗೆ ನೀರು ಸಿಗುವುದಕ್ಕೋಸ್ಕರ ಕೊಳವೆ ಬಾವಿಗಳನ್ನು ತೆಗೆಸಿರತಕ್ಕಂಥಾದ್ದು. ಅವರು ದಾನಶೂರ ಕರ್ಣನ ಮೊಮ್ಮಕ್ಕಳು. ಅವರು ತಮ್ಮ ಜಮೀನಿನ ಪೋರ್ಷನ್‌ನಲ್ಲಿ ಕೊಳವೆ ಬಾವಿಗಳನ್ನು ಹಾಕಿಸಿಕೊಂಡಿದ್ದಾರೆ. ಬಡಜನರಿಗೆ ಸ್ವಲ್ಪ ದಿವಸ ನೀರು ಕೊಡುತ್ತಾರೆ ಅಷ್ಟೆ. ಅಂತಹ ಬಾವಿಗಳು ಇವತ್ತು ಬಾಳಿವೆ. ಅಂಥಾದ್ದು ಒಂದು ತಾಲ್ಲೂಕಿನಲ್ಲಿ 8-10 ಸಿಗುತ್ತವೆ. ಅಂತಹ ಬಾವಿಗಳು ಪ್ರೈವೇಟ್ ಲ್ಯಾಂಡ್‌ನಲ್ಲಿದ್ದರೆ ಅವುಗಳನ್ನು ಪಬ್ಲಿಕ್ ಸಲುವಾಗಿ ಇಟ್ಟುಬಿಡಿ. That is our policy ಎಂದು ಹೇಳಿಬಿಡಿ.

ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುತ್ತಾ ಹೋದರೆ, ಬಹಳ ಡೀಟೇಲಾಗಿ ಹೇಳಬೇಕಾಗುತ್ತದೆ. ಮಾತೆತ್ತಿದರೆ 19 ತಿಂಗಳ ನೆನಪು ಬರುತ್ತದೆ, 19 ತಿಂಗಳ ಇತಿಹಾಸ ತಕ್ಷಣ ನೆನಪಿಗೆ ಬರುತ್ತದೆ. ಅಡ್ಮಿನಿಸ್ಟ್ರೇಷನ್ ಎಷ್ಟರ ಮಟ್ಟಿಗೆ ಲೂಸ್ ಆಗಿದೆಯೆಂದರೆ, ಸಬ್ ಡಿವಿಜನಲ್

ಮ್ಯಾಜಿಸ್ಟ್ರೇಟ್ ಆರ್ಡರ್ ಕೊಡುತ್ತಾರೆ, ಇವನು ಬಡವ, ಇವರಿಗೆ ಅನ್ಯಾಯವಾಗಿದೆ ಇದನ್ನು ತಡೆಗಟ್ಟಬೇಕು ಇವನಿಗೆ ಕಾಂಪನ್‌ಸೇಷನ್ ಕೊಡಬೇಕು ಎಂದು ಅವನ ಪರವಾಗಿ ಆರ್ಡರ್ ಮಾಡುತ್ತಾರೆ. ಡೆತ್ ರಿಲೀಫ್ ಆಕ್ಟ್ ಕೆಳಗೆ. ಅದರ ಪ್ರಕಾರ ಆ ಬಡ ರೈತ ನನ್ನ ಲ್ಯಾಂಡನ್ನು ರಿಲೀಸ್ ಮಾಡಿರಿ, ಬಿಡಿಸಿ ಎಂದು ಕೇಳಿದರೆ ಯಾರೂ ಕೇಳುವವರು ಇಲ್ಲ. ಸರ್ಕಲ್ ಇನ್‌ಸ್ಪೆಕ್ಟರ್ ಹತ್ತಿರ ಹೋದರೂ ಕೇಳುವವರಿಲ್ಲ ಸಬ್ ಇನ್‌ಸ್ಪೆಕ್ಟರ್ ಹತ್ತಿರ ಹೋದರೂ ಕೇಳುವವರು ಇಲ್ಲ .ಕಾಂಪನ್‌ಸೇಷನ್ ಕೊಡುತ್ತಾ ಇಲ್ಲ. ನನಗೆ ಲ್ಯಾಂಡನ್ನು ರಿಲೀಸ್ ಮಾಡಿ ಎಂದು ಕೇಳಲು ಪೋಲೀಸ್ ಸ್ಟೇಷನ್‌ಗೆ ಹೋದರೆ ಅಲ್ಲಿ ಸಬ್ ಇನ್‌ಸ್ಪೆಕ್ಟರ್ ಪಕ್ಕದಲ್ಲಿ ಮನಿ ಲೆಡಂರ್ ಕೂತಿರುತ್ತಾನೆ. ಇವರು El te of the society ನಮ್ಮ ಕಡೆ ನಿರ್ಗ ಎಂಬ ಗ್ರಾಮ ಇದೆ ಮನಾರ್ಕಲಿ ಎಂಬ ಗ್ರಾಮ ಇದೆ. ನಾವು ಜನರಿಗೆ ಅನುಕೂಲವಾಗಲಿ, ಅನ್ಯಾಯವಾದ ವರಿಗೆ ನ್ಯಾಯವಾಗಿ ದೊರಕಲಿ ಎಂಬ ಸದುದ್ದೇಶದಿಂದ ಕಾನೂನುಗಳನ್ನು ಮಾಡುತ್ತೇವೆ. ಅದು ಸರಿಯಾಗಿ ಇಂಪ್ಲಿಮೆಂಟ್ ಆಗದೇ ಹೋದರೆ ಅದರ ಫಲ ಏನಾಗುತ್ತದೆ ಎಂದು ಮಾನ್ಯ ಹಣಕಾಸಿನ ಸಚಿವರನ್ನು ಕೇಳುತ್ತೇನೆ The intention of the legislation is noble ನನ್ನ ಮಿತ್ರ ರಾದ ಶ್ರೀ ಮಾನ್ ಶೀರ್ನಾಳಿ ಚಂದ್ರಶೇಖರ್‌ರವರು ಹಸಿದ ಹೊಟ್ಟೆಯನ್ನು ತುಂಬಿಸದೇ ಹೋದರೆ ರಕ್ತ ಕ್ರಾಂತಿಗೆ ಜನ ಮನಸ್ಸು ಕೊಡುವ ಭಯ ಉಂಟಾಗಬಹುದು ಎಂದು ಹೇಳಿದರು. White collared people are the most opportunist class. ಇವರಿಂದ ಕ್ರಾಂತಿ ತರುವುದಕ್ಕೆ ಆಗುವುದಿಲ್ಲ. ಕ್ರಾಂತಿಯ ಸ್ಲೋಗನ್ ಕೊಡಬಹುದು, ರಕ್ತ ಕ್ರಾಂತಿ ಬಗ್ಗೆ ಮನೆಯಲ್ಲಿ ಕೂತು ವರತನಾಡದರೆ ಆಗುವುದಿಲ್ಲ.

ಇನ್ನು ಬೆಲೆಗಳ ಏರಿಕೆ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ ಬೆಲೆಗಳನ್ನು ಹತೋಟಿಯಲ್ಲಿ ತರುವುದಕ್ಕೆ ಸಾಕಷ್ಟು ಫುಡ್‌ಗ್ರೈನ್ಸ್ ನಮಲ್ಲಿದೆ ಎಂದು ಹೇಳಿದರು ಮಾನ್ಯ ಸ್ನೇಹಿತರಾದ ಶೀರ್ನಾಳಿ ಚಂದ್ರಶೇಖರ್‌ರವರು ದಕ್ಷಿಣ ಕನ್ನಡ ಜಿಲ್ಲೆಗೆ ನೀರು ಹರಿದಂತೆ ಅಕ್ಕಿ ಹರಿದು ಹೋಗುತ್ತಿದೆ ಎಂದು ಹೇಳಿದರು. ಕೇರಳಕ್ಕೆ ನಮ್ಮ ರಾಜ್ಯದಿಂದ ಅಕ್ಕಿಯನ್ನು ಕಳಿಸಬೇಡಿ ಎಂದು ನಾವು ಒಪ್ಪಿದವರಲ್ಲ. ಈಗ ಅಲ್ಲಿರತಕ್ಕ ಜೀತವನ್ನು ತೆಗೆದಿದ್ದರಿಂದ ಅವರಿಗೆ ಫುಲ್ ಫ್ರೀಡಂ ಹೆಚ್ಚಾಗು ತ್ತಿದೆ. ಅದನ್ನು ಕಂಟ್ರೋಲ್ ಪೂರ್ತಿಯಾಗಿ ಮಾಡುವುದು ನಿಮ್ಮ ಕೈಯಲ್ಲಿಲ್ಲ. ಅದು ಕೇಂದ್ರ ಸರ್ಕಾರದ ಕೈಯಲ್ಲಿದೆ. ನೀವು ಅವರ ಜೊತೆಯಲ್ಲಿ ಕೋ-ಆರ್ಡಿನೇಷನ್ ಇಟ್ಟುಕೊಂಡರೆ ಮಾತ್ರ ಆ ಪಾಲಿಸಿ ಇಂಪ್ಲಿಮೆಂಟ್ ಆಗುತ್ತದೆ. ಈಗ ಇನ್ನೊಂದು ಅಸ್ತ್ರ ಪವಾಡ ಉಪಯೋಗಿಸುವುದಕ್ಕೆ ಹೊರಟಿದ್ದಾರೆ. ಅವೇನೆಂಬುದನ್ನು ನಾನು ಮುಂದೆ ಹೇಳುತ್ತೇನೆ.

ನನಗೆ ಗೊತ್ತಿರುವ ಹಾಗೆ ಈಗ ಗೋಧಿ ಮತ್ತು ಜೋಳದ ಬೆಲೆಗಳ ಏರಿಕೆ ಜಾಸ್ತಿಯಾಗು ತ್ತಿರುವುದು ಶುಭಸೂಚನೆಯಲ್ಲ. ಇದರ ಬಗ್ಗೆ ಈಗಾಗಲೇ ಕೇಂದ್ರದಿಂದ ಇವರಿಗೆ ಫ್ರೀ ಟ್ರ್ಯಾಡ್ ವಾರ್ನಿಂಗ್ ಸಿಗ್ನಲ್ ಬರುತ್ತಿದೆ. ಬಡಬೋರೇಗೌಡನ ಹತ್ತಿರವಿದ್ದಂಥ ವಸ್ತುಗಳನ್ನು ಕ್ಯಾಪ್‌ಚರ್ ಮಾಡಿಕೊಂಡು ಎಕ್‌ಪ್ಲಾಯಟ್ ಕ್ಲಾಸ್ ಆಗಿರುವ ಮರ್ಚಂಟ್ಸ್ ಲೂಟಿ ಮಾಡುವುದಕ್ಕೆ ಹೊರಟಿ ದ್ದಾರೆ. ಅಂದವೇಲೆ ಕರ್ನಾಟಕ ಸರ್ಕಾರದವರು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿ ದ್ದಾರೆ ? ರೈತರು ಎಷ್ಟೋ ತಮ್ಮ ಜಮೀನುಗಳಲ್ಲಿ ಗೊಬ್ಬರ ಹಾಕಿ ಬೆವರು ಸುರಸಿ ಬೆಳೆದಂಥ ಪದಾರ್ಥಗಳಿಗೆ ಸರಿಯಾದ ಬೆಲೆ ಬರದೇ ಇದ್ದರೆ ತನ್ನ ಹೆಂಡತಿ ಮಕ್ಕಳನ್ನು ಸಾಕುವ ಬಗೆ ಸೇಗೆ? ತನ್ನ ಮಕ್ಕಳ ವಿದ್ಯಾಭ್ಯಾಸ ನಡೆಸುವುದು ಹೇಗೆ ? ಇಂತಹ ವಿಚಾರಗಳಲ್ಲಿ ಸರ್ಕಾರದವರು ಯಾವ ಒಂದು ಪ್ರಾವಿಜನ್ನನ್ನೂ ಇಟ್ಟಿಲ್ಲ. ಯಾವ ಒಂದು ಲೆಜಿಸ್‌ಲೇಷನ್ ಸಹ ಅದರ ಬಗ್ಗೆ ಮಾಡಿಲ್ಲ ಕನ್ ಸ್ಯೂಮರ್ಸ್ ಲೋನ್ ಬಗ್ಗೆ ತಾವೇನಾದರೂ ಪ್ರಾವಿಷನ್‌ಮಾಡಿದ್ದರೆ ಅದಕ್ಕೆ ನಾನು ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಈಗ ಅವರಿಗೆ ಲೋನ್ ಕೊಡುವ ವಿಚಾರ ಬರೀ ಪೇಪರ್‌ನಲ್ಲಿ ಮಾತ್ರ ಇದೆ. ಅವ್ಯಾವುದೂ ಸಹ ಇನ್ನೂ ಇಂಪ್ಲಿಮೆಂಟ್ ಆಗಿಲ್ಲ. ಇಂತಹ ಒಂದು ಸಂದರ್ಭದಲ್ಲಿ ಸರ್ಕಾರದವರು ದಿಟ್ಟ ಹೆಜ್ಜೆಯನು ಇಡ ಬೇಕಾಗುತ್ತದೆ. ರೈತರು ಹತ್ತಿರ ಇರತಕ್ಕ ಆಹಾರಧಾನ್ಯಗಳು ಯಾವಾಗಲೂ ಬಿಜಿನೆಸ್ ಮೀಪರ್ ಹತ್ತಿರವೇ ಇರುತ್ತದೆ. ಬಡವರ ಹತ್ತಿರ ಅಷ್ಟಾಗಿ ಇರುವುದೇ ಇಲ್ಲ. ಮಾನ್ಯ ಅರ್ಥಿಕಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಗ್ರಾಮೀಣ ನಿರ್ವಹಣಾ ಕಾಮಗಾರಿಗಳಲ್ಲಿ ತೊಡಗಿದ ಕೆಲಸಗಾರಿಗೆ ಕೊಡತಕ್ಕ ಮಜೂರಿಯ ಬದಲಾಗಿ ಹಾಗೆ

ಪೂರೈಕೆ ಮಾಡಿದ ಗೋಧಿ ಮತ್ತು ಮೈಲೋಗಳನ್ನು ಬಳಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವಂತೆ ಮಾಡುವುದೇ ಈ ಯೋಜನೆಯ ಉದ್ದೇಶವಾಗಿದೆ ಎಂಬುದು ಇಂತಹ ವ್ಯವಸ್ಥೆಯನ್ನು ಕೇವಲ ಕ್ಷಾಮ ಪ್ರದೇಶಗಳಲ್ಲಿ ಮಾತ್ರ ಮಾಡಿರುತ್ತಾರೆ. ಆದರೆ ಅಂತಹ ಧಾನ್ಯಗಳಲ್ಲಿ ಹೆಚ್ಚಿಗೆ ಹುಳುಗಳು ಸೇರಿಕೊಂಡಿವೆ. ಅದನ್ನು ಈಗ ಯಾರೂ ತೆಗೆದುಕೊಳ್ಳುಹಾಗೆ ಇಲ್ಲ. ರಾಗಿ ಮತ್ತು ಜೋಳವನ್ನು ಒಂದು ಕ್ವಿಂಟಾಲಿಗೆ 120 ರೂಪಾಯಿಗಳಿಗೆ ಮಾರಿದರೂ ಯಾರೂ ತೆಗೆದುಕೊಳ್ಳುತ್ತಾ ಇಲ್ಲ. ಏಕೆಂದರೆ ಹುಳುಗಳು ತಿನ್ನುವ ಮೈಲೋ ಮತ್ತು ಜೋಳವನ್ನು ಯಾರೂ ತೆಗೆದುಕೊಳ್ಳುತ್ತಾರೆ? ಇದರ ಬಗ್ಗೆ ರ್‍ಯಾಡಿಕಲ್ ಸ್ಟೆಪ್ಸ್ ತೆಗೆದುಕೊಳ್ಳಬೇಕು. ದಿಟ್ಟ ಹೆಜ್ಜೆ ಇಡಬೇಕು. ಹೋಲ್‌ಸೇಲಾಗಿ ಆಹಾರಸಾಮಗ್ರಿಗಳನ್ನು ನಾವು ತೆಗೆದುಕೊಳ್ಳಬೇಕು ಕೇಂದ್ರ ಸರ್ಕಾರ ನಾವು ಮಾಡುವ ಕೆಲಸಗಳಿಗೆ ಧೈರ್ಯ ಕೊಡಬೇಕು. ಅವರು ಆ ರೀತಿಯಾಗಿ ಬೆಂಬಲ ಕೊಡದೇ ಇದ್ದರೆ ಕೇಂದ್ರದವರು ರಾಜ್ಯ ಸರ್ಕಾರಕ್ಕೆ ಕೊ-ಆಪರೇಟ್ ಮಾಡುತ್ತಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರದವರು ಹೆಚ್ಚು ಹೆಚ್ಚಿಗೆ ಹೋಲ್‌ಸೇಲಾಗಿ ಆಹಾರ ಪದಾರ್ಥಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಎಲ್ಲಾ ಫೇರ್ ಪ್ರೈಸ್ ಡಿಪೋಗಳಿಗೆ ನ್ಯಾಯವಾಗಿ ವಿತರಣೆಮಾಡಲು ಸೂಕ್ತ ವ್ಯವಸ್ಥೆಯನ್ನು ಮಾಡಬೇಕು. ಯಾವ ರೀತಿಯಲ್ಲಿಯೂ ರೈತನ ಹತ್ತಿರವಿರುವ ಬತ್ತದ ಧಾನ್ಯಗಳನ್ನು ಬಿಜಿನೆಸ್ ಪೀಪಲ್ ಲೂಟಿ ಮಾಡಲು ಅವಕಾಶವನ್ನು ಕೊಡಬಾರದು. ಏಕೆಂದರೆ ಅವರ ಹತ್ತಿರ ಅಂತಹ ಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕೆ ಹೋದರೆ ಸುಮಾರು 10–15 ರೂಪಾಯಿಗಳಷ್ಟು ವ್ಯತ್ಯಾಸವಿರುತ್ತದೆ. ಇದಕ್ಕೆ ನಾವಾಗಿ ನಾವೇ ಇಂತಹ ಕೆಲವಾರು ಸನ್ನಿವೇಶಗಳನ್ನು ಅವರಿಗೆ ಕಲ್ಪಿಸಿಕೊಡುತ್ತಿದ್ದೇವೆ ಆದಕ್ಕಾಗಿ ಸರ್ಕಾರ ಇದರ ಬಗ್ಗೆ ಒಂದು ದಿಟ್ಟ ಹೆಜ್ಜೆಯನ್ನು ಕೂಡಲೇ ಇಡಬೇಕು. ನನಗೆ ತಿಳಿದಮಟ್ಟಿಗೆ ಇದುವರೆಗೂ ಯಾವ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿಲ್ಲ. ಅದರ ಬಗ್ಗೆ ಆಯವ್ಯಯದಲ್ಲಿ ಮಾನ್ಯ ಆರ್ಥಿಕ ಸಚಿವರು ಒಂದು ವಿಷಯವನ್ನೂ ಹೇಳಿಲ್ಲ ಆದರೆ ಮೈಲೊ ಮತ್ತು ಜೋಳದ ಧಾನ್ಯಗಳ ಬಗ್ಗೆ ಮಾತ್ರ ಹೇಳಿದ್ದಾರೆ ಆದರೆ ಅನೇಕ ಹಳ್ಳಿಗಳಲ್ಲಿ ಕೇವಲ ಒಂದು ಕೆ. ಜಿ. ಧಾನ್ಯವನ್ನೂ ಸಹ ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇಲ್ಲ ಕೆಲವು ಕಡೆಗಳಲ್ಲಿ ಒಂದು ತಿಂಗಳಿಗೆ ಕೇವಲ 900 ಗ್ರಾಂ ಸಕ್ಕರೆ ಮಾತ್ರ ಸಿಗುತ್ತದೆ. ಸುಮಾರು 9 ಜನ ಇರುವ ಒಂದು ಸಂಸಾರಕ್ಕೆ ಅದು ಎಲ್ಲಿ ಸಾಕಾಗುತ್ತದೆ? ಅದು ಕಾಮನ್ ಕನ್‌ಸ್ಯೂಮರ್‌ಸ್‌ಗೆ ಕೊಡುವ ಕ್ವಾಂಟಿಟಿಯೇ? ಸಕ್ಕರೆಯಾಗಲೀ ಕೆರೋಸೀನ್ ಆಯಿಲ್ ಆಗಲೀ ಅಥವಾ ಎಡಿಬಲ್ ಆಯಿಲ್ ಆಗಲೀ ಸಾಕಷ್ಟು ಎಲ್ಲಿ ಸಿಗುತ್ತಿದೆ? ಅವನಿಗೆ ವಾರಕ್ಕೊಂದುಸಾರಿ ಇವು ದೊರಕಿದರೆ ಅವನು ಹೇಗೆ ಜೀವನಮಾಡಬೇಕು? ಕೇವಲ ಒಗ್ಗರಣೆ ಹಾಕಿ ಅಡಿಗೆಗೆ ಉಪಯೋಗಿಸುವುದಕ್ಕೆ ಏನೂ ಸಾಲುತ್ತಿಲ್ಲ. ಫುಡ್‌ಗ್ರೇನ್ಸ್ ಎಲ್ಲವೂ ಸಾಕಷ್ಟು ಸಿಗುತ್ತದೆ, ಅವುಗಳ ಬೆಲೆಗಳು ಹತೋಟಿಯಲ್ಲಿವೆಯೆಂದು ಹೇಳಿದರೆ ಹೇಗೆ? ಈ ರೀತಿ ಹೇಳಿಕೆಗಳನ್ನು ಜನತೆಯ ಮುಂದೆ ರಾಜ್ಯ ಸರ್ಕಾರದವರು ಮಾಡುತ್ತಾ ಹೋದರೆ ನಾವು ಆತ್ಮವಂಚನೆಮಾಡಿದಂತಾಗುವುದಿಲ್ಲವೇ? ಇದರಿಂದ ಜನರಿಗೆ ನಾನಾ ಕಷ್ಟಗಳು ಒದಗುವುದು ಸಹಜ. ಆಹಾರಸಾಮಗ್ರಿಗಳ ಬೆಲೆಗಳು ಆಕಾಶಕ್ಕೆ ಏರುತ್ತಿದ್ದರೂ ನಾವಿನ್ನೂ ಕಣ್ಣು ಮುಚ್ಚಿಕೊಂಡು ಕೂತಿರುವುದೇ ಆಗಿದೆ ಚುನಾವಣೆಗೆ ಮುಂಚೆ ಇದ್ದ ಬೆಲೆಗಳು ಈಗ ಇಲ್ಲ. ಇನ್‌ಡೆಕ್ಸ್ ಆಫ್ ಪ್ರೈಸ್ ಸುಮಾರು 2-3 ತಿಂಗಳುಗಳಿಂದಲೂ ಬಹಳ ಜಾಸ್ತಿಯಾಗುತ್ತಲೇ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೋಗಿ ನೋಡಿದರೆ ಅಲ್ಲಿ ಒಬ್ಬರಿಗೊಬ್ಬರಿಗೇ ಜಗಳ ಆರಂಭವಾಗಿದೆ. ಅಲ್ಲಿನ ಜನರ ಲೈಫ್ ಹಾರ್ಡ್ ಫ್ಯಾಕ್ಟ್ಸ್ ಆಫ್ ಲೈಫ್. ಎಲ್ಲೋ ಕೆಲವು ಕಡೆಗಳಲ್ಲಿ ಮಾತ್ರ ಲಿಟಲ್ ಬಿಟ್ ಪ್ರೋಗ್ರೆಸಿವ್ ಅಷ್ಟೇ ಅಲ್ಲಿ class charecters hit the poor and help the rich ರೀತಿ ಆಗಿದೆ. ಆದ್ದರಿಂದ ಸರ್ಕಾರದವರು ಅಲ್ಲಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡಬೇಕು. ಆಹಾರಪದಾರ್ಥಗಳಿಗೆ ಅಬ್‌ನಾರ್ಮಲ್ ರೇಟ್ಸ್ ಹಾಕುವುದನ್ನು ತಡೆಗಟ್ಟಲು ಹೆಚ್ಚಿನ ಕೊ-ಆಪರೇಷನ್ ಅಗತ್ಯ. ಬಡವರ ಸಲುವಾಗಿ ಯಾವುದಾದರೂ ಒಳ್ಳೆಯ ಪ್ರೋಗ್ರಾಂಗಳನ್ನು ಹಾಕಿಕೊಳ್ಳಬೇಕು. ನಾವು ಡಾಗ್‌ಟಿಕ್ಸ್ ಅಲ್ಲ. ನಾವು ರಿಜಂಸ್‌ಗೆ ಬಾದರ್ ಮಾಡುವುದಿಲ್ಲ ಬಡವರಿಗೆ ಸಹಾಯ ಮಾಡದೆ ಬಾಯಲ್ಲಿ ಸುಮ್ಮನೆ ಸೋಷಿಯಾಲಿಜಂ ತತ್ವವನ್ನು ಪರಿಪಾಲಿಸುತ್ತಿದ್ದೇವೆಂದು ಹೇಳುವುದು ಸರಿಯಲ್ಲ. ರೈತರಿಗೆ ಸಾಕಷ್ಟು ಆಹಾರಧಾನ್ಯಗಳಿಗೆ ತಕ್ಕ ಬೆಲೆಯು ಸಿಗುವಂತೆ ವ್ಯವಸ್ಥೆ ಮಾಡಬೇಕು. ಬಡವರಿಗೆ ಸುಲಭ ಬೆಲೆಯಲ್ಲಿ ಎಲ್ಲಾ ಆಹಾರಸಾಮಗ್ರಿಗಳು ದೊರೆಯುವ ಬಗ್ಗೆ ಸರ್ಕಾರ ಕೂಡಲೆ ಏರ್ಪಾಡು ಮಾಡಬೇಕು ಅದಕ್ಕಾಗಿ ಎಷ್ಟು ದುಡ್ಡು ಬೇಕು. ಅದರ ಬಗ್ಗೆ ಎಷ್ಟು ಎಷ್ಟು ಯೋಜನೆಗಳನ್ನು ಹಾಕಿಕೊಳ್ಳಬೇಕೆಂಬುದನ್ನು ಸರ್ಕಾರ ಈಗಲೇ ಯೋಚನೆಮಾಡಬೇಕು.

ಇಡೀ ಇವರ ಸ್ಕೀಮುಗಳು ಪಾರ್ಲಿಮೆಂಟಿಗೆ ಹೋಗಿ ಮಂಜೂರಾಗಿ ಬರಬೇಕು. ಆದ್ದರಿಂದ ನಮ್ಮ ರಾಜ್ಯ ಸರ್ಕಾರದವರು ಈಗ ಎಷ್ಟು ಪ್ರಗತಿಪರವಾದ ಸ್ಕೀಂಗಳನ್ನು ಇದುವರೆಗೆ ಜಾರಿಗೆ ತಂದಿದ್ದಾರೆಂಬುದನ್ನು ನನಗೆ ತಿಳಿಸಬೇಕು. ಕೇರಳದಲ್ಲಿ ಕಾಂಗ್ರೆಸ್ ಸರ್ಕಾರ ಇದೆ ಅವರು ಎಷ್ಟೋ ಪ್ರಗತಿಪರವಾದಂಥ ಕಾರ್ಯಗಳನ್ನು ಕೈಗೊಂಡಿದ್ದಾರೆ. ದೆಹಲಿಯಲ್ಲಿಯೂ ಅದೇ ರೀತಿಯಲ್ಲಿ ನಾನಾ ರೀತಿಯಲ್ಲಿ ಪ್ರಗತಿಪರವಾದ ಕಾರ್ಯಗಳನ್ನು ಮಾಡಿದ್ದಾರೆ ಆದರೆ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ಸಿನವರು ಸ್ವಲ್ಪ ಐಡಿಯಾಲಾಜಿಕಲ್ ರೀತಿಯಲ್ಲಿ ಪಿಫ್ಟ್ ಅಂಡ್ ಲಿಫ್ಟ್‌ನಂತೆ ಕೆಲವಾರು ಇಂಟರ್‌ನಲ್ ಮ್ಯಾಟರ್ಸ್ ಬಗ್ಗೆ ಹೆಚ್ಚಿಗೆ ಸಫರ್ ಮಾಡಬೇಕಾಗಿ ಬರುವುದೇನೋ ನಿಜ. ಆದರಲ್ಲಿ ಲೆಗೇಷನ್ ಸಹ ಬರುತ್ತದೆ. ಫುಡ್‌ಗ್ರೇನ್ಸ್ ಪಾಲಿಸಿಯ ಮೇಲೆ ಹೆಚ್ಚಿನ ಕಂಪ್ಲೇಂಟ್ಸ್ ಬರುತ್ತಾ ಇವೆ. ಕಂಪ್ಲೀಟ್ ಬ್ಯಾಂಕ್‌ರಪ್ಟ್ ಮತ್ತು ಡಿಫಂಕ್ಟ್ ಪಾಲಿಸಿ ರೀತಿಯಲ್ಲಿ ಇಲ್ಲಿ ಆಳವಡಿಸುವುದು ಹೆಚ್ಚಾಗಿದೆ. ಅದನ್ನು ಅನೇಕ ಕಡೆಗಳಲ್ಲಿ ಜಾರಿಗೆ ತೆಗೆದುಕೊಂಡು ಬರುತ್ತಿದ್ದಾರೆ. ನಾವು ಇವೆಲ್ಲವನ್ನೂ ಒಂದು ಹತೋಟಿಗೆ ತಂದುಕೊಂಡು ಇದರ ಬಗ್ಗೆ ಏನೊಂದು ದಿಟ್ಟ ಹೆಜ್ಜೆಯನ್ನು ಇಟ್ಟುಕೊಂಡಿದ್ದೇವೋ ಆ ಒಂದು ದಿಟ್ಟ ಹೆಜ್ಜೆಯ ಪ್ರಕಾರ ಏನೊಂದು ಆಶೆಯನ್ನು ಇಟ್ಟುಕೊಂಡಿದ್ದೇವೋ ಆ ಒಂದು ದಿಟ್ಟ ಹೆಜ್ಜೆಯ ಆಶೆ ಇನ್ನೂ ಈಡೇರಲು ತಾವು ಯಾವ ಒಂದು ಕ್ರಮವನ್ನೂ ಇದುವರೆಗೆ ಇಟ್ಟಿಲ್ಲವೆಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಷಯ. ಲ್ಯಾಂಡ್ ರೆವಿನ್ಯೂ ಬಗ್ಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಹೈದರಾಬಾದಿನ ಕೆಲವು ಭಾಗಗಳಲ್ಲಿ ನೋಡಿದರೆ ಒಂದೊಂದು ಊರಿನಲ್ಲಿಯೂ 25-30 ಹೊಲಗಳಿರುತ್ತವೆ. ಅಲ್ಲೆಲ್ಲಾ ಹೆಚ್ಚಿಗೆ ಡ್ರೈಲ್ಯಾಂಡ್ ಇದೆ. ನಾನು ಮೊನ್ನೆ ಚಿಂಚೋಳಿ ಮತ್ತು ಹುಮನಾಬಾದ್ ತಾಲ್ಲೂಕುಗಳಲ್ಲಿ ಹೋದಾಗ್ಗೆ ಕಂಡುಬಂದಂಥ ವಿಚಾರಗಳನ್ನು ಪರಿಶೀಲಿಸಿದ್ದೇ ಆದರೆ ಅನೇಕ ಗ್ರಾಮಗಳಲ್ಲಿ ಜನರು ಬಹಳ ತೊಂದರೆಯಲ್ಲಿ ಸಿಕ್ಕಿ ನರಳುತ್ತಿದ್ದಾರೆ. ಹಿಂದೆ ಯಾವುದೋ ಒಂದು ಟೈಂನಲ್ಲಿ ಮಾಡಿದಂಥ ಕಾನೂನುಗಳನ್ನು ಈಗ ಕೆಲವು ಕಡೆಗಳಲ್ಲಿ ಜಾರಿಮಾಡು ವುದನ್ನೇ ಮುಂದುವರಿಸುತ್ತಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಬೇರೆ ರೀತಿಯಲ್ಲಿ ಕೆಲವಾರು ಕಾನೂನುಗಳನ್ನು ಜಾರಿಗೆ ತರುತ್ತಿದ್ದಾರೆ ಅಧಿಕಾರಿಗಳಿಂದ ರೈತರಿಗೆ ಇದರಿಂದ ಕಿರುಕುಳ ಹೆಚ್ಚಾಗುತ್ತಿದೆ. ನನಗೆ ತಿಳಿದ ಪ್ರಕಾರ ಲ್ಯಾಂಡ್ ರೆವಿನ್ಯೂ 10ರಷ್ಟು ಒಂದೊಂದು ಎಕರೆಗೆ 6-9-10ರಷ್ಟು ಲ್ಯಾಂಡ್ ರೆವಿನ್ಯೂ ಇದೆ. ಒಂದೊಂದು ಗ್ರಾಮದಲ್ಲಿಯೂ 30-40 ಎಕರೆಗಳಷ್ಟು ಜಮೀನು ಸರ್ಪ್ಲಸ್ ಇದೆ ಅಂದಮೇಲೆ ಒಂದು ಎಕರೆಗೆ ಶೇಕಡ 10ರಷ್ಟು ಲ್ಯಾಂಡ್ ರೆವಿನ್ಯೂ ಕೊಡಬೇಕಾಗುತ್ತದೆಂದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಅದರ ಬಗ್ಗೆ ಸರ್ಕಾರ ಹೆಚ್ಚು ವಿಚಾರಮಾಡದೆ ಅದನ್ನು ಹಾಗೆಯೆ ಬಿಟ್ಟಿರುವುದು ಸರಿಯಲ್ಲ. ಇದಲ್ಲದೆ ಈಗ ಅಗ್ರಿಕಲ್ಚರಲ್ ಟ್ಯಾಕ್ಸೇಷನ್ ಬೇರೆ ನಡೆದಿವೆ. ಉದ್ದೇಶಪೂರ್ವಕವಾಗಿಯೇ ಆ ವಿಚಾರವನ್ನು ಈಗ ತರುತ್ತಿದ್ದಾರೆ ಮಾನ್ಯ ಕಂದಾಯ ಸಚಿವರು ಇದನ್ನು ಹಾಕುವಾಗ ಲ್ಯಾಂಡ್ ರೆವಿನ್ಯೂ ಬೇಸಿಸ್ ಮೇಲೆ ಸಾಯಿಲ್ ಕ್ವಾಲಿಟಿ ನೋಡಿಕೊಂಡು ಅದರಲ್ಲಿ ಎ ಬಿ ಸಿ ಗ್ರೇಡ್ ಮಾಡಬೇಕು ಒಂದುವೇಳೆ ಡ್ರೈಲ್ಯಾಂಡ್ ಇದ್ದರೆ ಅಂತಹ ಕಡೆಗಳಲ್ಲಿ ಒಬ್ಬೊಬ್ಬನಿಗೆ ಸುಮಾರು 3-4 5 ಸಾವಿರ ರೂಪಾಯಿಗಳಷ್ಟು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೊಡಬೇಕಾಗಿ ಬರುತ್ತದೆ ಹಿಂದೆ ಲ್ಯಾಂಡ್ ರೆವಿನ್ಯೂ ಹೇಗೆ ಕೊಡುತ್ತಿದ್ದರೆಂದರೆ, ಬರೀ ಬ್ಲಾಕ್‌ಸಾಯಿಲ್ ಇದ್ದಂಥ ಭೂಮಿಗೆ ಶೇಕಡ 4ರಷ್ಟು ಲ್ಯಾಂಡ್ ರೆವಿನ್ಯೂ ಕೊಡಬೇಕೆಂದು ಹೇಳುತ್ತಿದ್ದರು ಡ್ರೈಲ್ಯಾಂಡ್ ಇದ್ದು ಅದು ಆಸ್ಮಾನಿಪಾರಿ ಭೂಮಿಯಾಗಿದ್ದರೆ ಶೇಕಡ 100ರಷ್ಟು ಲ್ಯಾಂಡ್ ರೆವಿನ್ಯೂ ಕೊಡಬೇಕೆಂದು ಹೇಳುತ್ತಿದ್ದರು ಭೂಮಿ ಒಳ್ಳೆಯದಾಗಿದ್ದು ಆದರಲ್ಲಿ ಸಾಯಿಲ್ ಕ್ವಾಲಿಟಿ ಉತ್ತಮವಾಗಿದ್ದರೆ ಅದನ್ನು ಅನೇಕ ಕಡೆಗಳಲ್ಲಿ ಟೆಸ್ಟ್ ಮಾಡದೆಯೆ ಒಬ್ಬೊಬ್ಬರಿಗೆ 3-4 ಸಾವಿರ ರೂಪಾಯಿಗಳಷ್ಟು ಲ್ಯಾಂಡ್ ರೆವಿನ್ಯೂ ಹಾಕುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಒಬ್ಬ ರೈತ ಸುಮಾರು 9 ಸಾವಿರ ರೂಪಾಯಿಗಳಷ್ಟು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೊಡಬೇಕೆಂದು ಬರೆದಿದ್ದಾರೆ ಇದು ಎಕ್ಸೆಸ್ ಆಗುತ್ತದೆ ಆದ್ದರಿಂದ ಅಂತಹ ಕೇಸುಗಳನ್ನು ರೀಎಗ್ಸಾಮಿನ್ ಮಾಡಿಸಬೇಕು. ಇದರಿಂದ ಸಾವಿರಾರು ರೈತರು ಏನಿದ್ದಾರೆಯೋ ಅಂತಹವರಿಗೆ ಸ್ವಲ್ಪಮಟ್ಟಿಗೆ ರಿಲೀಫ್ ಕೊಟ್ಟಹಾಗೆ ಆಗುತ್ತದೆ. ಇದರ ಬಗ್ಗೆ ಸರಿಯಾದ ವ್ಯಾಲ್ಯುಯೇಷನ್ ಮಾಡುವುದು ತಿಳಿಯದೇ ಇರುವುದರಿಂದ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹೆಚ್ಚಿಗೆ ಹಾಕದೇ ಇರುವುದು ಅವರ ಒಂದು ನ್ಯಾಯವಾದ ಬೇಡಿಕೆಯಾಗಿರುವುದರಿಂದ ಅದರ ಬಗ್ಗೆ ಪ್ರಾಂಪ್ಟ್

ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಸರ್ಕಾರ ಯಾವುದೋ ಒಂದು ಸೋಷಿಯಲಿಸ್ಟ್ ಪಾಲಿಸಿಯ ಮೇಲೆ ದುಡ್ಡು ಹೆಚ್ಚಿಗೆ ಖರ್ಚುಮಾಡಬಹುದು ಕೆಲವು ಅಧಿಕಾರಿಗಳು ಕೊಡತಕ್ಕ ಬೋಗಸ್ ಮಾಹಿತಿಯ ಮೇಲೆ ಸರ್ಕಾರ ಕೆಲವಾರು ವಿಚಾರಗಳನ್ನು ಇದರ ಬಗ್ಗೆ ಪರಿಶೀಲನೆ ಮಾಡುವುದು ಸರಿಯಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಚುನಾವಣೆಯ ಸಮಯದಿಂದ ಕೆಲವಾರು ರಸ್ತೆಗಳ ಬಗ್ಗೆ ಸಾಕಷ್ಟು ಕೂಡ ಬಹಳ ಜೋರಾಗಿ ನಡೆಯುತ್ತಾ ಇಲ್ಲ. ಅಲ್ಲಿ ಲ್ಯಾಂಡ್ ರೆವಿನ್ಯೂ ಸುಮಾರು 5–10 ವರ್ಷಗಳಿಂದಲೂ ಕಲೆಕ್ಟ್ ಆಗುತ್ತಾ ಇಲ್ಲ. ಸ್ಟೇಟ್ ಹೈವೇಗಳಲ್ಲಿ ಇರತಕ್ಕ ಲ್ಯಾಂಡ್ಸ್ ಬಗ್ಗೆ ಸರಿಯಾದ ಲ್ಯಾಂಡ್ ರೆವಿನ್ಯೂವನ್ನು ನಿಗದಿಮಾಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ವಿಷಯಗಳನ್ನು ಮುಂದೆ ರೆವಿನ್ಯೂ ಮೇಲೆ ಮಾತನಾಡಬಹುದು.

ಶ್ರೀ ವಿ. ಎನ್. ಪಾಟೀಲ್.—ಸುಮಾರು 5-10 ವರ್ಷಗಳಿಂದ ಇದ್ದಂಥ ರೇಟ್ಸ್ ಪ್ರಕಾರ ಲ್ಯಾಂಡ್ ರೆವಿನ್ಯೂ ವಸೂಲಾಗಿದ್ದರೂ, ಅದರ ಬಗ್ಗೆ ಒಂದು ನಯಾಪೈಸಾ ಕಂಪನ್ಸೇಷನ್ ಸರ್ಕಾರದವರು ಕೊಟ್ಟಿಲ್ಲ. ಬಿದರ್–ಚಿಂಚೋಳಿ ಮಾರ್ಗದಲ್ಲಿ 45 ಮೈಲಿಗಳ ರಸ್ತೆ ಇದೆ. ಅದನ್ನು ಮಾಡಿದ್ದರೂ ಇನ್ನೂ ಕಂಪನ್ಸೇಷನ್ ಸಿಕ್ಕಿಲ್ಲ.

6-00 P. M.

ಹತ್ತಾರು ವರ್ಷಗಳಿಂದ ರಸ್ತೆಗಳು ಆಗಿವೆ. ಯಾರ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದರೋ ಅವರಿಗೆ ಇಲ್ಲಿಯವರೆಗೆ ಒಂದು ನಯಾಪೈಸೆ ಕಾಂಪನ್ಸೇಷನ್ ಕೊಟ್ಟಿಲ್ಲ. ನಮ್ಮ ಚಿಂಚೋಳಿ ಮುಂತಾದ ಊರುಗಳಲ್ಲಿ 40-50 ರಸ್ತೆಗಳನ್ನು ಮಾಡಿದ್ದಾರೆ ಒಂದಕ್ಕೂ ಕಾಂಪನ್ಸೇಷನ್ ಸಿಕ್ಕಿಲ್ಲ. ನಮ್ಮ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನಲ್ಲಿ ಕಡ್ಡಾಯವಾಗಿ ಲ್ಯಾಂಡ್ ರೆವಿನ್ಯೂ ವಸೂಲಿಯನ್ನು ಮಾಡುತ್ತಿದ್ದಾರೆ. ಯಾವ ದಾಕ್ಷಿಣ್ಯವಿಲ್ಲದೆ ತೆಗೆದುಕೊಳ್ಳುತ್ತಿದ್ದಾರೆ ಇನ್ನೂ ಫವರ್ ಸಪ್ಲೈ. ಬಗ್ಗೆ

MADAM SPEAKER.—Now the House stands adjourned to meet tomorrow at 1 P M.

The House adjourned at Two Minutes past Six of the Clock to meet again at one of the Clock on Wednesday, the 20th April, 1977.